**ದಿನಾಂಕ: 21.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ**

1) ಸರ್ವೆ ನಂ.743 ಇದು ಮಲ್ಲಪ್ಪ ಕೂರಿಯವರ ಜಮೀನು ಎಂದರೆ ಸರಿ. ಸದರಿ ಜಮೀನು 5 ಎಕರೆ 38 ಗುಂಟೆ ಇತ್ತು ಎಂದರೆ ಸರಿ. ಅದರಲ್ಲಿ ಪಶ್ಚಿಮ ಭಾಗದ 3 ಎಕರೆ 10 ಗುಂಟೆ ಮಲ್ಲಪ್ಪ 2ನೇ ಪ್ರತಿವಾದಿಗೆ ನೀಡಿದ ಮೇರೆಗೆ 2ನೇ ಪ್ರತಿವಾದಿ ಹೆಸರಿಗೆ ಸದರಿ ಜಮೀನಿನ ಪಹಣಿಯಲ್ಲಿ ದಾಖಲು ಆಗಿರುತ್ತದೆ ಎಂದರೆ ಸಾಕ್ಷಿ ಮೋಸತನದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.743 5 ಎಕರೆ 38 ಗುಂಟೆ ನನ್ನ ತಂದೆ ತೀರಿಕೊಳ್ಳುವರೆಗೂ ಆತನ ಆಸ್ತಿ ಆಗಿತ್ತು ಎಂದರೆ ಸಾಕ್ಷಿ ನಮ್ಮ ಆಸ್ತಿ ಎಂದು ನುಡಿಯುತ್ತಾರೆ.

2) ದಾವಾಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಮತ್ತು ನಾನು ಅದರ ಕಬ್ಜಾವಹಿವಾಟಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಕಿರುಕುಳ ಕೊಡಬೇಕೆಂಬ ದುರುದೇಷದಿಂದ ಖೊಟ್ಟಿ ದಾವೆ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಒಂದನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ., ಬಸವನ ಬಾಗೇವಾಡಿ.